ನೀವು ಮಾತನಾಡುವುದು ರೆಕಾರ್ಡಿಗೆ ಹೋಗುವುದಿಲ್ಲ. ಇದು ಒಳ್ಳೆಯದಲ್ಲ. ಒಂದು ಗಂಟೆಗೆ ಮುಗಿಯಬೇಕೆಂದು ನಾನು ಮೊದಲೇ ಹೇಳಿದ್ದೇನೆ, ನೀವು ಈ ರೀತಿ ಮಾಡಿದರೆ ನಿನ್ನೆ ಹಾಗೆ ಶೂನ್ಯವೇಳೆ, ಪ್ರಶ್ನೋತ್ತರವನ್ನು ಬಂದ್ ಮಾಡಬೇಕಾಗುತ್ತದೆ. ಈ ರೀತಿ ಮಾತನಾಡಿದರೆ ಒಳ್ಳೆಯದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕಳೆದ ಸಲ ನಾನು ಸೌತ್ ಕೆನರಾಗೆ ಹೋಗಿ ಬಂದಾಗ, ಈ ಪ್ರಶ್ನೆಯನ್ನು ಎತ್ತಿದ್ದೆ. ಆಗ ತಾವು ಒಂದು ಯೋಜನೆಯನ್ನೂ ಕೂಡ ನಾನು ತಯಾರು ಮಾಡುತ್ತಿದ್ದೇನೆ, ವರ್ಲ್ಡ್‌ಬ್ಯಾಂಕ್‌ನಿಂದ ಹಣ ತೆಗೆದುಕೊಂಡು ಸಹಾಯ ಮಾಡುತ್ತೇನೆಂದೂ ಹೇಳಿದ್ದಿರಿ. ಏನು ಕೆಲಸವಾಗಿದೆ ಅದಕ್ಕಾದರೂ ಹಣ ಒದಗಿಸುವುದು ಮಾಡಬೇಕು. ನೀವು ನ್ಯಾಚುರಲ್ ಕ್ಯಲಾಮಿಟಿ ಫಂಡ್‌ನಿಂದಲಾದರೂ ಕೊಡಿಸಿ ಅಥವಾ ಫೈನಾನ್ಸ್ ಮಿನಿಸ್ಟರ್‌ರವರಿಂದಲಾದರೂ ಎಕ್ಸ್‌ಟ್ರಾ ಬಜೆಟ್ ತೆಗೆದುಕೊಂಡಾದರೂ ಮಾಡಿ. ಮಾಡದೇ ಹೋದರೆ ಮುಂದಿನ ಕೆಲಸಗಳಾವುವೂ ನಡೆಯುವುದಿಲ್ಲ, 3-3 ವರ್ಷಗಳು ಕೆಲಸ ಮಾಡಿ, ಅಲ್ಲಿಗೆ ನಿಂತುಹೋದರೆ ಪ್ರಾಬ್ಲಂ ಆಗುತ್ತದೆ. ಪ್ರಯತ್ನಿಸುತ್ತೇನೆಂದು ಹೇಳಿದ್ದೀರಿ, ಎಷ್ಟು ದಿವಸಗಳಲ್ಲಿ ಅದನ್ನು ಮಾಡಿಸಿಕೊಡುತ್ತೀರೆಂಬ ಬಗ್ಗೆ ಹೇಳಿ.

ಶ್ರೀ ತಿಪ್ಪೇಸ್ವಾಮಿ: ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಾನು ಆಗಲೇ ನಮ್ಮ ಅರ್ಥ ಸಚಿವರೊಡನೆ ಮಾತನಾಡಿದ್ದೇನೆ. ಅವರೂ ಸಹ ಏನು 5 ಕೋಟಿ ರೂಪಾಯಿ ಇದೆಯೋ ಅದಕ್ಕೆ ಹಣ ತೊಡಗಿಸುವುದಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ಮೊನ್ನೆಯೇ ಕೊಡುತ್ತೇನೆಂದು ಹೇಳಿದ್ದರು, ಸಧ್ಯಕ್ಕೆ ತೊಂದರೆಯಾಗಿರುವುದರಿಂದ, ಕೆಲವೇ ದಿನಗಳಲ್ಲಿ ಆದಷ್ಟು ಬೇಗ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

ವಿಷಯ: ಗುಳೇದಗುಡ್ಡದ ಅಸಂಗಿ ಪಂಪ್ ಹೌಸ್

216 (1210)

ಶ್ರೀ ರಾಜಶೇಖರ ವಿ.ಶಿಲವಂತ (ಗುಳೇದಗುಡ್ಡ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರಕ್ಕೆ ನೀರು ಸರಬರಾಜು ಮಾಡುವ ಅಸಂಗಿ ಪಂಪ್‌ಹೌಸ್‌ಗೆ ಪ್ರತ್ಯೇಕ ವಿದ್ಯುತ್ ತಂತಿ ಹಾಕುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಾರ್ಯವನ್ನು ಎಂದು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಶರಣ ಬಸಪ್ಪ ದರ್ಶಾನಾಪುರ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಸದರೀ ಪಂಪ್‌ಹೌಸ್‌ಗಾಗಿಯೇ ಪ್ರತ್ಯೇಕವಾದ 11 ಕೆ.ವಿ., ವಿದ್ಯುತ್ ಲೈನನ್ನು ನಿರ್ಮಾಣ ಮಾಡಬೇಕಾಗಿರುವುದರಿಂದ, ಗುಳೇದಗುಡ್ಡ ಪುರಸಭೆಯು ತಮ್ಮ ಖರ್ಚಿನಲ್ಲಿಯೇ ಈ ಕಾರ್ಯವನ್ನು ಸ್ವಯಂ ನಿರ್ವಹಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಈ ಕಾರ್ಯಕ್ಕೆ ತಗಲುವ ವೆಚ್ಚವನ್ನು ಗುಳೇದಗುಡ್ಡ ಪುರಸಭೆಯ ಮಂಡಳಿಗೆ ಸಂಪೂರ್ಣವಾಗಿ ಭರಿಸುವುದು ಅಗತ್ಯವಾಗಿರುತ್ತದೆ.

ಶ್ರೀ ರಾಜಶೇಖರ ವಿ.ಶೀಲವಂತ: ಗುಳೇದಗುಡ್ಡ ನಗರಕ್ಕೆ ನೀರು ಸರಬರಾಜು ಮಾಡುವ ಆಸಂಗಿ ಪಂಪ್‌ಹೌಸ್‌ಗೆ ಪ್ರತ್ಯೇಕ ವಿದ್ಯುತ್ ತಂತಿ ಹಾಕುವ ಸಲುವಾಗಿ ಕೇಳಿದ್ದಕ್ಕೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಈ ಒಂದು ವ್ಯವಸ್ಥೆಗೆ ಸಂಪೂರ್ಣ ಖರ್ಚನ್ನು ಪುರಸಭೆಯವರೇ ವಹಿಸಬೇಕೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

11.20 ಎ.ಎಂ.

ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ಮುನಿಸಿಪಾಲಿಟಿ ಸ್ಥಿತಿ ಯಾವ ರೀತಿ ಇದೆ ಎನ್ನುವುದು ಬಹುಶಃ ತಮಗೆ ಗೊತ್ತಿದೆ. ಹತ್ತನೇ ಹಣಕಾಸು ಯೋಜನೆ ಮತ್ತು ಐಎಸ್‌ಡಿಎಂ ನಿಂದ ಹಣ ತೆಗೆದುಕೊಂಡು ಮೂಲಭೂತ ಸೌಲಭ್ಯಗಳನ್ನು ಹೆಚ್ಚು ಮಾಡಿಕೊಳ್ಳುವ ಸಂದರ್ಭ ಇದ್ದಾಗ, ಸಂಪೂರ್ಣ ದುಡ್ಡನ್ನು ನೀವೇ ಹಾಕಿಕೊಳ್ಳಬೇಕಾದರೆ ಅಲ್ಲಿನ ಪರಿಸ್ಥಿತಿ ಬಹಳ ಕಠಿಣವಾಗುತ್ತದೆ. ಇದಕ್ಕಾಗಿ, ತಾವೇ ದಯಮಾಡಿ ಕಡಿಮೆ ಅಮೌಂಟ್‌ನ್ನು ಮುನಿಸಿಪಾಲಿಟಿ ಕಡೆಯಿಂದ ತೆಗೆದುಕೊಂಡು, ಹೆಚ್ಚಿನ ಗ್ರಾಂಟ್‌ನ್ನು ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶಾನಾಪುರ್: ಮಾನ್ಯ ಸದಸ್ಯರು ಕೇಳಿರುವುದಕ್ಕೆ, ಈಗಾಗಲೇ ಅಲ್ಲಿ ಹೋಗತಕ್ಕಂಥ ಲೈನ್‌ನಲ್ಲಿ ಕನ್‌ಕ್ಷನ್ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ವಾಟರ್ ಸಪ್ಲೈಯನ್ನು ಸ್ಟೇಷನಿಂದ ಡೈರೆಕ್ಟ್ ಕನ್‌ಕ್ಷನ್ ಕೊಡಿ ಎಂದು ಅವರು ಕೇಳುತ್ತಾರೆ. ಈ ರೀತಿ ಡೈರೆಕ್ಟ್ ಕನ್‌ಕ್ಷನ್ ಕೊಡಬೇಕಾದರೆ ಮುನಿಸಿಪಾಲಿಟಿಯವರು ಏನು ಒಂದು ಅಂದಾಜು ಮಾಡಿರುತ್ತಾರೋ ಆ ಅಂದಾಜಿನ ಅಮೌಂಟ್‌ನ್ನು ಭರಿಸಿದರೆ ನಾವು ತಕ್ಷಣ ಮಾಡಿಕೊಡುತ್ತೇವೆ, ಬೇಕಾದರೆ ಮುನಿಸಿಪಾಲಿಟಿಯವರೆ ಸರ್ವಿಸ್ ಚಾರ್ಜ್ 10, 15 ಪರ್ಸೆಂಟ್ ತುಂಬಿಕೊಂಡು ತಾವೇ ಮಾಡಿಕೊಳ್ಳಬಹುದು. ನಾವೇನು ಮಾಡುವ ಅವಶ್ಯಕತೆ ಇಲ್ಲ.

ಶ್ರೀ ರಾಜಶೇಖರ ವಿ.ಶೀಲವಂತ: ಈಗಿರುವ ಪರಿಸ್ಥಿತಿಯಲ್ಲಿ ದಿನಕ್ಕೆ ಸುಮಾರು ಮೂರರಿಂದ ಮೂರೂವರೆ ಗಂಟೆಯಷ್ಟು ಮಾತ್ರ ಕರೆಂಟ್ ಇರುತ್ತದೆ. ಇಂತಹ ಸನ್ನಿವೇಶದಲ್ಲಿ ಸುಮಾರು ನಲವತ್ತು ಸಾವಿರ ಜನಸಂಖ್ಯೆಯುಳ್ಳ ನಗರಕ್ಕೆ ನೀರು ತುಂಬುವುದಕ್ಕಾಗಿ ಹೇಗೆ ಪಂಪ್ ಮಾಡುವುದಕ್ಕೆ ಸಾಧ್ಯ? ನಮಗೆ ಹದಿನೈದು

ದಿನಕ್ಕೊಂದು ಬಾರಿಯಾದರೂ ನಮಗೆ ನೀರು ಬರುವುದಿಲ್ಲ, ಆದ್ದರಿಂದ ನಮಗೆ ಸೆಪರೇಟ್ ಆಗಿ ಒಂದು ಲೈನ್ ಕೊಡಿಸಲು, ತಾವು ಹೇಗಾದರೂ ಮಾಡಿ ಕಾಸ್ಟ್ ಕಡಿಮೆ ಮಾಡಿ, ಮುನಿಸಿಪಾಲಿಟಿಯಿಂದ ಕಡೆಯಿಂದ ದುಡ್ಡನ್ನು ತೆಗೆದುಕೊಂಡು ಮಾಡಬೇಕು, ಇಲ್ಲವಾದರೆ ಮುನಿಸಿಪಾಲಿಟಿಗೆ ಗ್ರಾಂಟ್ ಆದರೂ ಸರ್ಕಾರದಿಂದ ಕೊಡಿಸುವ ವ್ಯವಸ್ಥೆಯಾಗಬೇಕು.

ಶ್ರೀ ಶರಣಬಸಪ್ಪ ದರ್ಶಾನಾಪುರ್: ಮಾನ್ಯ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡಿ ಏನು ಅನುಕೂಲವಾಗುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಿಕೊಡುತ್ತೇವೆ.

ವಿಷಯ: ಭಟ್ಕಳ ತಾಲ್ಲೂಕಿನ ಕಡುವಿನ ಕಟ್ಟಿಯ ಚಿಕ್ಕ ಅಣೆಕಟ್ಟಿನ ದುರಸ್ಥಿ ಕಾರ್ಯ

217 (1490)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನ ಕಡವಿನ ಕಟ್ಟಿಯ ಚಿಕ್ಕ ಅಣೆಕಟ್ಟಿನ ರಿಪೇರಿಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ, ಹಾಗೂ ಎಷ್ಟು ಹಣ ಖರ್ಚಾಗಿದೆ?

ಆ) ಈ ಕೆಲಸ ಯಾವ ಹಂತದಲ್ಲಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಭಟ್ಕಳ ತಾಲ್ಲೂಕಿನ ಕಡವಿನ ಕಟ್ಟಿಯ ಚಿಕ್ಕ ಅಣೆಕಟ್ಟಿನ ರಿಪೇರಿಗೆ ಸರ್ಕಾರದಿಂದ ಬಿಡುಗಡೆಯಾದ ವರ್ಷವಾರು ಹಣ ಹಾಗೂ ಖರ್ಚು ವಿವರ ಈ ಕೆಳಗಿನಂತಿದೆ.

ವರ್ಷ	ಬಿಡುಗಡೆಯಾದ ಹಣ (ಲಕ್ಷ ರೂ.)	ಖರ್ಚಾದ ಹಣ ಲಕ್ಷ ರೂ.
1994-95	2.20	0.20
1995-96	4.40	0. 19
1996-97	2.00	0.68
1997-98	1. 50	2.40

ಆ) ಈ ಡ್ಯಾಂನ ಮೇಲ್ಭಾಗದಲ್ಲಿ ಸೋರುವಿಕೆ ತಡೆಗಟ್ಟುವ ಸಲುವಾಗಿ 190.50 ಮಿ.